

بسم اللهِ الرّحمٰن الرّحیم

# ಖಿಲಾಫತ್ – ದೈವಿಕ ಅನುಗ್ರಹ ಮತ್ತು ಆಶೀರ್ವಾದಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **‘ಮಸ್ಜಿದ್ ಮುಬಾರಕ್’** ನಿಂದ **24–05–2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಯಾರ ಮೂಲಕ ಇಸ್ಲಾಮಿನ ಪುನರುಜ್ಜೀವನ ಮಾಡುವುದಾಗಿ ಅಲ್ಲಾಹನು ವಾಗ್ದಾನ ಮಾಡಿರುವನೋ ಆ ವಾಗ್ದತ್ತ ಮಸೀಹ್‌ರನ್ನು ನಂಬಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಿದನು ಎಂಬುದು ನಮ್ಮ ಮೇಲೆ ಅಲ್ಲಾಹನ ದೊಡ್ಡ ಔದಾರ್ಯವಾಗಿದೆ. ಅಲ್ಲಾಹನ ವಾಗ್ದಾನ ಪ್ರಕಾರ ಮತ್ತು ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿಗಳ ಪ್ರಕಾರ ಹಝ್ರತ್ ಪೈಗಂಬರ್(ಸ)ರ ದಾಸ್ಯದಲ್ಲಿ ಇಸ್ಲಾಮಿನ ಪುನರುಜ್ಜೀವನಕ್ಕಾಗಿ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರನ್ನು ಕಳುಹಿಸಿದನು. ಅನಂತರ ಅಲ್ಲಾಹನ ಮತ್ತು ಹಝ್ರತ್ ಪೈಗಂಬರ್(ಸ)ರ ವಾಗ್ದಾನಗಳ ಪ್ರಕಾರವೇ ಹಝ್ರತ್ ಮಸೀಹ್ ಮೌಊದ್(ಅ) ಸ್ಥಾಪಿಸಿದ ಜಮಾಅತಿನಲ್ಲಿ ಖಿಲಾಫತಿನ ವ್ಯವಸ್ಥೆ ಜಾರಿಯಾಯಿತು. ಒಟ್ಟಿನಲ್ಲಿ ಅಲ್ಲಾಹನ ವಾಗ್ದಾನಗಳು ಮತ್ತು ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿಗಳು ನೆರವೇರಿದ್ದನ್ನು ಪ್ರಕಟಪಡಿಸಲು ನಾವು ಪ್ರತಿ ವರ್ಷ ಜಮಾಅತ್ ಸ್ಥಾಪಿತಗೊಂಡಿರುವ ಎಲ್ಲೆಡೆ ಮೇ 27ರಂದು ಖಿಲಾಫತ್ ದಿನವನ್ನು ಆಚರಿಸುತ್ತೇವೆ.

ಮೇ 26ರಂದು ಹಝ್ರತ್ ಮಸೀಹ್ ಮೌಊದ್(ಅ) ನಿಧನಗೊಂಡರು. ಮೇ 27ರಂದು ಅಲ್ಲಾಹನ ವಾಗ್ದಾನಗಳ ಪ್ರಕಾರ ಹಝ್ರತ್ ಮೌಲಾನಾ ಹಕೀಂ ನೂರುದ್ದೀನ್(ರ)ರನ್ನು ಜಮಾಅತಿನವರು ಚುನಾಯಿಸಿ ಅವರ ಕೈಯಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರ ಕೆಲಸವನ್ನು ಮುಂದುವರೆಸುವುದಾಗಿ ಪ್ರತಿಜ್ಞೆ ಮಾಡಿದರು. ಅವರ ಮರಣದ ನಂತರ ಜಮಾಅತಿನವರು ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ)ರ ಕೈಯಲ್ಲಿ ಒಟ್ಟು ಸೇರಿದರು. ಅನಂತರ ಮೂರನೇ ಮತ್ತು ನಾಲ್ಕನೇ ಖಿಲಾಫತಿನ ಕಾಲಘಟ್ಟ ಆರಂಭವಾಯಿತು. ಪ್ರತಿಯೊಂದು ಕಾಲಘಟ್ಟದಲ್ಲೂ ಎದುರಾಳಿಗಳು ಜಮಾಅತನ್ನು ಮುಗಿಸಿಬಿಡಲು ಶತ ಪ್ರಯತ್ನ ಮಾಡಿದರು. ಆದರೆ ಎಲ್ಲ ತರಹದಲ್ಲೂ ಅವರಿಗೆ ಪರಾಜಯವನ್ನು ಎದುರಿಸಬೇಕಾಗಿ ಬಂತು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್ಮಹುಲ್ಲಾಹ್)ರ ನಿಧನದ ನಂತರ ಅಲ್ಲಾಹನು ತನ್ನ ವಾಗ್ದಾನದ ಈಡೇರುವಿಕೆಯನ್ನು ತೋರಿಸುತ್ತಾ ಐದನೇ ಖಿಲಾಫತ್ ಚುನಾಯಿತಗೊಂಡಿತು. ನನಗೆ ಅನೇಕ ದೌರ್ಬಲ್ಯಗಳಿದ್ದೂ ಅಲ್ಲಾಹನು ನನಗೆ ಅಸಾಧಾರಣವಾದ ನೆರವು ಮತ್ತು ಸಹಾಯವನ್ನು ದಯಪಾಲಿಸಿದನು ಹಾಗೂ ಜಮಾಅತಿನ ಪ್ರಗತಿಯ ಹೆಜ್ಜೆಯನ್ನು ಮುಂದಕ್ಕೆ ಸಾಗಿಸುತ್ತಾ ಹೋದನು. ಅನೇಕ ದೇಶಗಳಲ್ಲಿ ಅಹ್ಮದಿಯ್ಯತ್ತಿನ ಗಿಡವನ್ನು ನೆಡಲಾಯಿತು. ಅಲ್ಲಿ ಅಹ್ಮದಿಯಾ ಜಮಾಅತಿನ ಸರಿಯಾದ ವ್ಯವಸ್ಥೆ ಸ್ಥಾಪಿತಗೊಂಡಿತು, ನೂರಾರು ನಗರಗಳು ಮತ್ತು ಪಟ್ಟಣಗಳಲ್ಲಿ ಅಲ್ಲಾಹನು ಸ್ವತಃ ಜನರಿಗೆ ಮಾರ್ಗದರ್ಶನ ನೀಡಿ ಖಿಲಾಫತಿನೊಂದಿಗೆ ಇರುವ ಸಹಾಯ ಮತ್ತು ನೆರವಿನ ದೃಶ್ಯಗಳನ್ನು ತೋರಿಸಿ ಜನರ ಹೃದಯಗಳಲ್ಲಿ ಖಿಲಾಫತಿನೊಂದಿಗೆ ಇರುವ ಸಂಬಂಧದ ಆವೇಶವನ್ನು ಉಂಟುಮಾಡಿ ನಿಷ್ಠಾವಂತರ ಜಮಾಅತುಗಳ ಸ್ಥಾಪನೆಯ ಏರ್ಪಾಡು ಮಾಡಿದನು. ಈ ದೃಶ್ಯಗಳನ್ನು ತೋರಿಸುತ್ತಾ ಹೋಗುತ್ತಿದ್ದಾನೆ.

ಒಟ್ಟಿನಲ್ಲಿ ಅಲ್ಲಾಹನು ತನ್ನ ವಾಗ್ದಾನವನ್ನು ಮರೆಯುವವನೋ ಮುರಿಯುವವನೋ ಅಲ್ಲ. ಅವನು ತನ್ನ ಅತ್ಯಂತ ಪ್ರಿಯ ಪ್ರವಾದಿಯಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿಗಳನ್ನು ಈಡೇರಿಸುವುದರಲ್ಲಿ ಯಾವುದೇ ಕೊರತೆ ಉಂಟುಮಾಡುವವನಲ್ಲ. ಖಿಲಾಫತ್ ಅಲಾ ಮಿನ್‌ಹಾಜಿನುಬುವ್ವತ್ (ಪ್ರವಾದಿತ್ವದ ಮಾರ್ಗದಲ್ಲಿ ಖಿಲಾಫತ್) ಆಗಮಿಸುವುದು ಎಂಬ ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿ ಈಡೇರಿದ್ದಾಗಿ ಕಂಡ ನಾವು ಸೌಭಾಗ್ಯವಂತರು. ಆದ್ದರಿಂದ ಹಝ್ರತ್ ಪೈಗಂಬರ್(ಸ)ರ ದಾಸರಾದ ಹಝ್ರತ್ ಮಸೀಹ್ ಮೌಊದ್(ಅ)ರ ಜಮಾಅತಿನೊಂದಿಗೆ ಪ್ರಾಮಾಣಿಕವಾಗಿ ಸಂಬಂಧ ಇರಿಸುವವರು ಅಲ್ಲಾಹನ ಅನುಗ್ರಹಗಳ ವಾರಸುದಾರರು ಆಗುತ್ತಾ ಹೋಗುವರು – ಇನ್‌ಶಾ ಅಲ್ಲಾಹ್. ‘ನನ್ನ ನಂತರ ಜಮಾಅತಿನಲ್ಲಿ ನನ್ನ ಖಿಲಾಫತಿನ ಪರಂಪರೆ ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿ ಪ್ರಕಾರ ಜಾರಿಯಲ್ಲಿರುವುದು ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳಿರುವರು. ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳಿದರು: ನಾನು ಖಾತಮುಲ್ ಖುಲಫ ಆಗಿರುವೆನು. ಇನ್ನು ಮುಂದೆ ಖಿಲಾಫತಿನ ಸ್ಥಾನ ನೀಡಿ ಅಲ್ಲಾಹನು ಕಳುಹಿಸುವ ಎಲ್ಲರೂ ನನಗೆ ವಿಧೇಯರಾಗಿ ಬರುವರು. ಆದ್ದರಿಂದ ಲೌಕಿಕವಾಗಿ ಈಗ ಯಾರೇ ಎಷ್ಟೇ ಶ್ರಮಿಸಿದರೂ ಕೂಡ ಹಝ್ರತ್ ಮಸೀಹ್ ಮೌಊದ್(ಅ)ರಿಂದ ಬೇರ್ಪಟ್ಟು ಖಿಲಾಫತನ್ನು ಸ್ಥಾಪಿಸಲು ಎಂದಿಗೂ ಸಾಧ್ಯವಲ್ಲ.

ಹಝ್ರತ್ ಮಸೀಹ್ ಮೌಊದ್(ಅ)ರ ನಿಧನದ ಸಮಯ ಸಮೀಪಗೊಂಡಾಗ ಅವರು ಖಿಲಾಫತ್ ಜಾರಿಯಲ್ಲಿ ಬರುವುದಾಗಿ ಸುವಾರ್ತೆ ನೀಡುತ್ತಾ ಹೀಗೆ ಹೇಳಿದರು: ಅಲ್ಲಾಹನು ಎರಡು ವಿಧಗಳ ಶಕ್ತಿ ಪ್ರದರ್ಶನ ಮಾಡುತ್ತಾನೆ. ಮೊದಲನೆಯದಾಗಿ ಪ್ರವಾದಿಗಳ ಮೂಲಕ ಅಲ್ಲಾಹನು ತನ್ನ ಶಕ್ತಿಯ ಹಸ್ತವನ್ನು ತೋರಿಸುತ್ತಾನೆ. ಎರಡನೆಯದಾಗಿ, ಪ್ರವಾದಿಗಳು ನಿಧನಗೊಂಡಾಗ ಕಷ್ಟಗಳನ್ನು ಎದುರಿಸಬೇಕಾಗಿ ಬರುತ್ತದೆ ಮತ್ತು ಶತ್ರುಗಳು ತೀವ್ರವಾಗಿ ವಿರೋಧಿಸಲು

ಆರಂಭಿಸುತ್ತಾರೆ. ಈಗ ಕೆಲಸ ಹಾಳಾಗುವುದು ಮತ್ತು ಈ ಜಮಾಅತ್ ನಾಶವಾಗುವುದೆಂದು ದೃಢವಾಗಿ ಭಾವಿಸುತ್ತಾರೆ. ಜಮಾಅತಿನ ಒಳಗಿರುವವರು ಕೂಡ ಸಂಶಯಗಳಿಗೆ ತುತ್ತಾಗಿ ಬಲಗುಂದಿದವರಾಗುತ್ತಾರೆ. ಅನೇಕ ದೌರ್ಭಾಗ್ಯವಂತರು ಜಮಾಅತನ್ನು ಬಿಟ್ಟು ಹೋಗುತ್ತಾರೆ. ಆಗ ಅಲ್ಲಾಹನು ತನ್ನ ಶಕ್ತಿಯನ್ನು ಎರಡನೆಯ ಸಾರಿ ಬಲಯುತವಾಗಿ ಪ್ರದರ್ಶಿಸುತ್ತಾನೆ. ಕುಸಿದು ಹೋಗುತ್ತಿರುವ ಜಮಾಅತನ್ನು ಅವನು ಹಿಡಿದು ನಿಲ್ಲಿಸುತ್ತಾನೆ. ಒಟ್ಟಿನಲ್ಲಿ ಯಾರು ಕೊನೆಯ ವರೆಗೆ ಸಹನೆ ತೋರುತ್ತಾನೋ ಅವನು ಅಲ್ಲಾಹನ ಈ ಅದ್ಭುತ ದೃಷ್ಟಾಂತವನ್ನು ಕಾಣುವನು.

ಅವರು ಮತ್ತೂ ಹೇಳಿದರು: ಆದುದರಿಂದ ಪ್ರಿಯರೇ, ಪುರಾತನ ಕಾಲದಿಂದಲೂ ಅವನು ಎರಡು ದಿವ್ಯ ಶಕ್ತಿಗಳನ್ನು ಪ್ರಕಟಿಸುತ್ತಾನೆ ಮತ್ತು ಶತ್ರುಗಳ ಎರಡು ಮಿಥ್ಯ ಸಂತೋಷಗಳನ್ನು ನಿರರ್ಥಕ ಎಂದು ತೋರಿಸಿ ಕೊಡುತ್ತಾನೆ ಎಂಬುದು ಅಲ್ಲಾಹನ ನಡವಳಿಕೆಯಾಗಿದೆ. ಆದುದರಿಂದ ಈಗ ಅಲ್ಲಾಹನು ತನ್ನ ಪುರಾತನವಾದ ನಡವಳಿಕೆಯನ್ನು ಬಿಟ್ಟುಬಿಡುವುದು ಸಂಭಾವ್ಯವಲ್ಲ. ಆದುದರಿಂದ ನಾನು ನಿಮ್ಮೊಡನೆ ಹೇಳಿದ ಮಾತಿನಿಂದ ನೀವು ದುಃಖಿತರಾಗಬೇಡಿರಿ ಮತ್ತು ನಿಮ್ಮ ಹೃದಯಗಳು ಗಾಬರಿಗೊಳ್ಳದಿರಲಿ. ಏಕೆಂದರೆ ಅಲ್ಲಾಹನ ದಿವ್ಯ ಶಕ್ತಿಯ ಎರಡನೆಯ ಪ್ರಕಟನೆಯನ್ನು ನೋಡುವುದು ಸಹ ನಿಮಗೆ ಅಗತ್ಯವಾಗಿದೆ. ಅದು ಆಗಮಿಸುವುದು ನಿಮಗೆ ಉತ್ತಮವಾಗಿದೆ. ಯಾಕೆಂದರೆ ಅದು ಶಾಶ್ವತವಾಗಿದೆ. ಅದರ ಸರಪಳಿ ಪುನರುತ್ಥಾನದ ದಿನದ ತನಕ ಕಡಿದು ಹೋಗಲಾರದು. ನಾನು ನಿಮ್ಮ ಬಳಿಯಿಂದ ನಿರ್ಗಮಿಸದೆ ಆ ದ್ವಿತೀಯ ದಿವ್ಯ ಶಕ್ತಿ ಆಗಮಿಸಲಾರದು.

ಸಾಂದರ್ಭಿಕವಾಗಿ ನಾನು ಹೇಳುತ್ತೇನೆ. ಯಾರು ಹಝ್ರತ್ ಮಸೀಹ್ ಮೌಊದ್[ಅ]ರ ಪ್ರಾಯದ ಬಗ್ಗೆ ಚರ್ಚೆ ಮಾಡುತ್ತಾರೋ ಅವರಿಗೂ ಇದರಲ್ಲಿ ಉತ್ತರವಿದೆ ಎಂದು ನಾನು ಭಾವಿಸುತ್ತೇನೆ. ಹಝ್ರತ್ ಮಸೀಹ್ ಮೌಊದ್[ಅ] ತನ್ನ ಪ್ರಾಯವನ್ನು ಎಣಿಸಿಕೊಂಡು ಇಷ್ಟು ವರ್ಷಗಳು ಬಾಕಿಯಿವೆ ಎಂದು ಹೇಳಲಿಲ್ಲ. ಬದಲಾಗಿ ತನ್ನ ಮರಣುವಿಕೆಯ ಬಗ್ಗೆ ಸೂಚನೆ ನೀಡಿದರು. ಪ್ರಾಯದ ಬಗ್ಗೆಗಿನ ಚರ್ಚೆಗೆ ಯಾವುದೇ ಪ್ರಾಮುಖ್ಯತೆ ನೀಡಲಿಲ್ಲ. ಬದಲಾಗಿ ಕೆಲಸವನ್ನು ನೆರವೇರಿಸುವುದಕ್ಕೆ ಪ್ರಾಮುಖ್ಯವನ್ನು ನೀಡಿದರು. ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ನಾನು ನಿಮ್ಮನ್ನು ಬಿಟ್ಟು ಹೋಗುವಾಗ ಅಲ್ಲಾಹನು ತನ್ನ ದ್ವಿತೀಯ ಶಕ್ತಿಯನ್ನು ನಿಮಗಾಗಿ ಕಳುಹಿಸಿ ಕೊಡುವನು. "ಬರಾಹೀನೆ ಅಹ್ಮದಿಯಾ" ಎಂಬ ಗ್ರಂಥದಲ್ಲಿರುವ ವಾಗ್ದಾನ ಪ್ರಕಾರ ಆ ದ್ವಿತೀಯ ದಿವ್ಯ ಶಕ್ತಿ ಸದಾಕಾಲ ನಿಮ್ಮ ಜೊತೆಗಿರುವುದು. ಆ ವಾಗ್ದಾನ ನನ್ನ ಬಗ್ಗೆಯಲ್ಲ. ಅದು ನಿಮ್ಮ ಬಗ್ಗೆ ಇರುವ ವಾಗ್ದಾನವಾಗಿದೆ. 'ನಿನ್ನ ಅನುಯಾಯಿಗಳ ಈ ಜಮಾಅತಿಗೆ ಪುನರುತ್ಥಾನದ ದಿನದ ತನಕ ಅನ್ಯರ ಮೇಲೆ ಜಯವನ್ನು ದಯಪಾಲಿಸುವೆನು' ಎಂದು ಅಲ್ಲಾಹನು ಹೇಳಿದ್ದಾನೆ. ಆದುದರಿಂದ ನಿಮ್ಮಿಂದ ನಾನು ಅಗಲಿ ಹೋಗುವ ದಿನವು ಆಗಮಿಸುವುದು ಅವಶ್ಯಕವಾಗಿದೆ. ಅನಂತರ ಶಾಶ್ವತ ವಾಗ್ದಾನದ ದಿನವು ಆಗಮಿಸುವುದು. ನಮ್ಮ ದೇವನು ವಾಗ್ದಾನಗಳನ್ನು ಈಡೇರಿಸುವವನೂ ಸತ್ಯವಂತನೂ ಆಗಿರುವನು. ಅವನು ವಾಗ್ದಾನ ಮಾಡಿದ ಎಲ್ಲವನ್ನೂ ನಿಮಗೆ ತೋರಿಸುವನು. ಈ ದಿನವು ಲೋಕದ ಅಂತಿಮ ದಿನವಾಗಿದ್ದು ಅನೇಕ ವಿಪತ್ತುಗಳು ಬಂದೆರಗಲಿರುವ ದಿನವಾಗಿದ್ದರೂ ಕೂಡ ಅಲ್ಲಾಹನು ಮುಂಚಿತವಾಗಿ ತಿಳಿಸಿದ ಎಲ್ಲ ಸಂಗತಿಗಳು ಈಡೇರುವ ತನಕ ಈ ಲೋಕವು ನಾಶವಾಗದೆ ಉಳಿಯುವುದು.

ಅಲ್ಲಾಹನ ವಾಗ್ದಾನ ಪ್ರಕಾರ ಹಝ್ರತ್ ಮಸೀಹ್ ಮೌಊದ್[ಅ]ರ ನಿಧನದ ನಂತರ ಖಿಲಾಫತಿನ ಪ್ರತಿಯೊಂದು ಕಾಲಘಟ್ಟದಲ್ಲಿ ಜಮಾಅತ್ ಪ್ರಗತಿಯ ಹಂತಗಳನ್ನು ದಾಟುತ್ತಾ ಹೋಗುತ್ತಿದೆ. ಖಲೀಫರನ್ನು ಎಂದಿಗೂ ಕಂಡೇ ಇರದ ಜನರಿಗೆ ಅಲ್ಲಾಹನು ಎಂದಿನಂತೆ ಸ್ವತಃ ಮಾರ್ಗದರ್ಶಿಯಾಗಿ ಮತ್ತು ದೂರ ದೂರದಲ್ಲಿ ಇರುವ ದೇಶಗಳಲ್ಲಿ ನೆಲೆಸಿರುವ ಜನರ ಹೃದಯಗಳಲ್ಲಿ ಸ್ವತಃ ಸನ್ಮಾರ್ಗವನ್ನು ಹಾಕಿ ಖಿಲಾಫತಿನ ಧ್ವಜದ ಅಡಿಗೆ ಬರುವ ರೀತಿಯಲ್ಲಿ ದಾರಿ ತೋರಿಸುತ್ತಾನೆ. ನಾನು ಕೆಲವು ಜನರ ಘಟನೆಗಳನ್ನು ಮುಂದಿರಿಸುತ್ತೇನೆ. ಅವುಗಳ ಮೂಲಕ ಅಹ್ಮದಿಯಾ ಖಿಲಾಫತಿನೊಂದಿಗೆ ಅಲ್ಲಾಹನ ಸಹಾಯ ಮತ್ತು ಅವನ ವಾಗ್ದಾನಗಳು ಈಡೇರುತ್ತಿರುವ ದೃಶ್ಯಗಳನ್ನು ನಾವು ನೋಡುತ್ತೇವೆ.

ಬುರ್ಕಿನಾಫಾಸೋದ ಒಂದು ಜಮಾಅತಿನಲ್ಲಿ ಮೊದಲ ಬಾರಿಗೆ ಎಂ.ಟಿ.ಎ. ಅಳವಡಿಸಲಾಗಿತ್ತು ಮತ್ತು ಜನರು ಮೊದಲ ಬಾರಿಗೆ ಖಲೀಫತುಲ್ ಮಸೀಹ್‌ರನ್ನು ಕಂಡರು. ಆಗ ಅವರ ಕಣ್ಣುಗಳು ತೇವಗೊಂಡುವು. ಸಂತೋಷ ಅವರ ಮುಖಗಳಿಂದ ಪ್ರಕಟಗೊಳ್ಳುತ್ತಿತ್ತು. ಅವರು ಹೇಳುತ್ತಾರೆ: ಎಂ.ಟಿ.ಎ.ದಲ್ಲಿ ಖಲೀಫರನ್ನು ಕಂಡು ನಮ್ಮ ಕಣ್ಣುಗಳಿಗೆ ತಂಪು ಮತ್ತು ಹೃದಯಗಳಿಗೆ ನೆಮ್ಮದಿ ಲಭಿಸುತ್ತದೆ.

ಗೇಂಬಿಯಾದ ಅಮೀರ್ ಸಾಹಿಬ್ ಬರೆಯುತ್ತಾರೆ: ಎಂ.ಟಿ.ಎ.ದಲ್ಲಿ ಖಲೀಫತುಲ್ ಮಸೀಹ್‌ರು ಭಾಷಣ ಮಾಡುತ್ತಿರುವುದಾಗಿ ಒಬ್ಬ ಮೋಟರ್ ಮೇಕಾನಿಕ್ ಆಕಸ್ಮಿಕವಾಗಿ ಕಂಡಾಗ ಹೀಗೆ ಹೇಳಿದರು: ಈ ಮಹಾನುಭಾವರಿಗೆ ಅಲ್ಲಾಹನ ನೆರವು ಲಭ್ಯವಿದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಹಾಗೆ ಅವರು ತನ್ನ ಕುಟುಂಬದ 14 ಸದಸ್ಯರ ಸಮೇತ ಬೈಅತ್ ಮಾಡಿಕೊಂಡರು.

ಜರ್ಮನಿಯ ತಬ್ಲೀಗ್ ಸೆಕ್ರಟರಿ ಬರೆಯುತ್ತಾರೆ: ಒಬ್ಬ ಅರೇಬಿಯ ವ್ಯಕ್ತಿ ಅವರ ಸ್ಟಾಲಿಗೆ ಬಂದರು ಮತ್ತು ಪವಿತ್ರ ಖುರ್‌ಆನಿನ ತರ್ಜುಮೆಯನ್ನು ಕೊಂಡು ಹೋದರು. ಜರ್ಮನಿಯ ವಾರ್ಷಿಕ ಜಲ್ಸದಲ್ಲಿ ಬರಲು ಅವರನ್ನು ಆಮಂತ್ರಿಸಲಾಯಿತು. ಕೆಲಸದಿಂದ ಬಿಡುವು ಲಭಿಸದ ಕಾರಣದಿಂದ ಅವರು ತನ್ನ ಹಿರಿಯ ಸಹೋದರ ಮತ್ತು ಕುಟುಂಬದ ಮತ್ತೊಬ್ಬ ಸದಸ್ಯನನ್ನು ಜಲ್ಸದಲ್ಲಿ ಭಾಗವಹಿಸಲು ಕಳುಹಿಸಿದರು. ಜಲ್ಸದಲ್ಲಿ ನನ್ನ ಭಾಷಣವನ್ನು ಆಲಿಸಿದ ನಂತರ ಅವರ ಸಹೋದರ ಹೀಗೆ ಹೇಳಿದರು: ಇವರು ಅಲ್ಲಾಹನ ನೆರವು ಲಭಿಸಿರುವ ಮಹಾನುಭಾವರು ಆಗಿರುವರು. ಅವರು ಅದೇ ರಾತ್ರಿ

ಬೈಅತ್ ಫಾರಂ ಭರ್ತಿ ಮಾಡಿ ಅಹ್ಮದಿಯಾ ಜಮಾಅತಿನಲ್ಲಿ ಸೇರ್ಪಡೆಗೊಂಡರು.

ಕೇಮರೂನಿನ ಒಂದು ಪಟ್ಟಣದಲ್ಲಿ ಎಂಟು ಕುಟುಂಬಗಳು ಬೈಅತ್ ಮಾಡಿಕೊಂಡು ಜಮಾಅತಿನಲ್ಲಿ ಸೇರಿಕೊಂಡರು. ನವ ಅಹ್ಮದಿಯರು ಹೀಗೆ ಹೇಳುತ್ತಾರೆ: ಎಂ.ಟಿ.ಎ. ನಮ್ಮ ಮಕ್ಕಳ ಜೀವನವನ್ನು ಬದಲಿಸಿದೆ. ಅವರಲ್ಲಿ ಒಬ್ಬ ಯುವಕನಿಗೆ ನನ್ನ ಜುಮಾ ಖುತ್ಬ ಆಲಿಸಲು ಅಧ್ಯಾಪಕ ರಜೆ ನೀಡುತ್ತಿರಲಿಲ್ಲ. ಆತನು ಹೇಳಿದನು: ಸ್ಕೂಲನ್ನು ತೊರೆಯಲು ನನಗೆ ಸಾಧ್ಯವಿದೆ. ಆದರೆ ಖುತ್ಬವನ್ನು ಬಿಡಲು ನನ್ನಿಂದ ಸಾಧ್ಯವಲ್ಲ.

ಬುರ್ಕಿನಾಫಾಸೋದಲ್ಲಿ ಒಬ್ಬ ವ್ಯಕ್ತಿ ಎಂ.ಟಿ.ಎ.ದಲ್ಲಿ ನನ್ನನ್ನು ಕಂಡಾಗ ಅವರು ಹೇಳಿದರು: ನಾನು ಇವರನ್ನು ಕನಸಿನಲ್ಲಿ ಕಂಡಿದ್ದೇನೆ. ಹೀಗೆ ಹೇಳಿ ಅವರು ಯಾವುದೇ ಪುರಾವೆಯನ್ನು ಕೇಳದೇ ಅಹ್ಮದಿಯ್ಯತ್ತನ್ನು ಪ್ರವೇಶಿಸಿದರು. ಅವರ ಗ್ರಾಮದ ಅನೇಕ ಜನರು ಅಹ್ಮದಿಯ್ಯತ್ತನ್ನು ಸ್ವೀಕಾರ ಮಾಡಿಕೊಂಡರು. ಈಗ ಅಲ್ಲಾಹನ ಅನುಗ್ರಹದಿಂದ ಆ ಗ್ರಾಮದಲ್ಲಿ ಒಂದು ಸುದೃಢವಾದ ಜಮಾಅತ್ ಸ್ಥಾಪಿತಗೊಂಡಿದೆ.

(ವಿಷಯವನ್ನು ಮುಂದುವರೆಸುತ್ತಾ ಹುಝೂರ್ ಕೆಲವು ಇತರ ದೇಶಗಳಾದ ಕೊಂಗೋಕನ್ಸಾಶ, ಸೆನಿಗಲ್, ಬೆಲ್ಜಿಯಂ, ಗಿನಿಬಸಾವ್, ಕಿರ್ಗಿಸ್ಥಾನ, ನೈಜೀರಿಯ ಮತ್ತು ಮಾಲಿಯಿಂದ ಅಹ್ಮದಿಯಾ ಖಿಲಾಫತಿನೊಂದಿಗೆ ಅಲ್ಲಾಹನ ಸಹಾಯ ಮತ್ತು ಅವನ ವಾಗ್ದಾನಗಳ ಈಡೇರುವಿಕೆಯ ದೃಶ್ಯಗಳನ್ನು ಒಳಗೊಂಡ ಇನ್ನಷ್ಟು ವಿಶ್ವಾಸವರ್ಧಕ ಘಟನೆಗಳನ್ನು ಸಹ ಮುಂದಿರಿಸಿದರು. ಅನಂತರ ಹುಝೂರ್ ಹೇಳಿದರು:) ಇವು ಅಲ್ಲಾಹನು ಸ್ವತಃ ಜನರ ಹೃದಯಗಳನ್ನು ತೆರೆಯುತ್ತಿದ್ದಾನೆ ಎಂಬ ದೈವಿಕ ಸಹಾಯವನ್ನು ಪ್ರಕಟಪಡಿಸುವ ಕೆಲವು ಘಟನೆಗಳಾಗಿವೆ. ಇವು ಅನ್ಯರ ಹೃದಯಗಳಲ್ಲಿ ಅಹ್ಮದಿಯಾ ಖಿಲಾಫತಿನ ಪ್ರಭಾವವನ್ನು ನೆಲೆನಿಲ್ಲಿಸುತ್ತಿವೆ ಮತ್ತು ಉತ್ತಮ ಸ್ವಭಾವ ಉಳ್ಳವರನ್ನು ಖಿಲಾಫತಿನೊಂದಿಗೆ ಜೋಡಿಸುತ್ತಿವೆ. ಅಹ್ಮದಿಯಾ ಖಿಲಾಫತಿಗೆ ಸಹಾಯ ಮತ್ತು ನೆರವನ್ನು ಅಲ್ಲಾಹನೇ ನೀಡುತ್ತಿದ್ದಾನೆ ಮತ್ತು ಜಮಾಅತಿನ ಪ್ರತಿಯೊಂದು ದಿನ ಪ್ರಗತಿಯ ಮಾರ್ಗಗಳಲ್ಲಿ ಚಲಿಸುತ್ತಿದೆ ಎಂಬುದಕ್ಕೆ ಅಹ್ಮದಿಯಾ ಖಿಲಾಫತಿನ ಚರಿತ್ರೆಯ ಪ್ರತಿಯೊಂದು ದಿನ ಸಾಕ್ಷ್ಯಾಧಾರವಾಗಿದೆ. ಅಲ್ಲಾಹನು ನನಗೂ ತನ್ನ ಕೃಪೆಯಿಂದ ಆ ಹೊಣೆಗಾರಿಕೆಯನ್ನು ಈಡೇರಿಸಲು ಸೌಭಾಗ್ಯ ನೀಡಲಿ. ಪ್ರತಿಯೊಬ್ಬ ಅಹ್ಮದಿಯನ್ನು ಪರಿಪೂರ್ಣ ನಿಷ್ಠೆ ಮತ್ತು ಪ್ರಾಮಾಣಿಕತೆಯೊಂದಿಗೆ ಅಹ್ಮದಿಯಾ ಖಿಲಾಫತಿನೊಂದಿಗೆ ಜೋಡಿಸಲಿ. ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ಅಲ್ಲಾಹನು ವಾಗ್ದಾನ ಮಾಡಿದ ಎಲ್ಲ ಉದ್ದೇಶಗಳನ್ನು ಅವನು ಈಡೇರಿಸಲಿ. ಅಹ್ಮದಿಯಾ ಖಿಲಾಫತಿನ ಮೂಲಕ ಏಕದೇವನ ಆಧಿಪತ್ಯ ಲೋಕದಲ್ಲಿ ಸ್ಥಾಪಿತವಾಗಲಿ. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಧ್ವಜ ಲೋಕದಲ್ಲಿ ಆರೋಹಣವಾಗುವ ದೃಶ್ಯವನ್ನು ಲೋಕವು ಕಾಣುವಂತಾಗಲಿ.

(ಖುತ್ಬದ ಕೊನೆಯಲ್ಲಿ ಹುಝೂರ್ ಇತ್ತೀಚೆಗೆ ನಿಧನರಾದ ಸನ್ಮಾನ್ಯ ಚೌಧರಿ ನಸ್ರುಲ್ಲಾಹ್ ಖಾನ್ ಸಾಹಿಬ್ ಮತ್ತು ಸನ್ಮಾನ್ಯ ಕಂವರ್ ಇದ್ರೀಸ್ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸಿ ಅವರ ಜನಾಝ ಗ಼ಾಯಿಬ್ ನಮಾಝ್ ನಿರ್ವಹಿಸುವುದಾಗಿ ಹೇಳಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*
*At, **'Masjid Mubarak'**, Islamabad, Tilford, UK.* On 24-05-2024
**Summarized by** *Majlis Ansarullah Bharat*
***Kannada Translation**:* Moulavi Inamullah for Kannada Desk, Qadian
***Reviewed by**:* M.P Ibrahim |***Layout**:* U Basheer Ahmad
***Published By**:* Kannada Isha'at Team for Nazarath Nashr-O-Isha'ath, Qadian
***Email**: khutuba.kannada@gmail.com*
**You can find all the Sermons archived at**: www.alislam.org/friday-sermon